ದಿಃ 31-10-2013 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಗಿದೆ.

ಪಾಟೀ ಸವಾಲು ಃ ಡಿಕಿದಾರರ ಪರವಾಗಿ ಶ್ರೀಬಿಹೆಚ್ ವಕೀಲರಿಂದಃ

ನಾನು 7 ವರ್ಷಗಳಿಂದ ವಕೀಲಿ ವೃತ್ತಿ ಮಾಡುತ್ತಿದ್ದೇನೆ. ನನ್ನ ತಂದೆ ಜೀವಿತವಿದ್ದಾರೆ. ನಾನು ಮತ್ತು ನನ್ನ ತಂದೆ ಒಂದೇ ಕುಟುಂಬದಲ್ಲಿ ಇದ್ದೇವೆಂದರೆ ಸರಿ. ನಾನು ಸರ್ವೆ ನಂ.32ಃಪಿದಲ್ಲಿ 1 ಎಕರೆ 5 ಗುಂಟೆ ಜಮೀನದಲ್ಲಿಯ 30X50 ಕ್ಷೇತ್ರದ ಖಾಲಿ ಜಾಗೆ ಮೇಲೆ ಹಕ್ಕನ್ನು ಪ್ರತಿಪಾದಿಸುತ್ತಿದ್ದೇನೆ. ಈ ಕ್ಷೇಮ್ನು ಬಿಟ್ಟು ನನ್ನದು ಡಿಕ್ರಿದಾರರು ಅರ್ಜಿಯಲ್ಲಿ ಅನುಸೂಚಿಗಳಲ್ಲಿ ತೋರಿಸಿದಂತಹ ಯಾವುದೇ ಆಸ್ತಿಗಳ ಮೇಲೆ ನಾನು ನನ್ನ ಹಕ್ಕನ್ನು ಪ್ರತಿಪಾದಿಸುತ್ತಿಲ್ಲ. ನಾನು ಕ್ಷೇಮ ಮಾಡುತ್ತಿರುವ 30X50 ಕ್ಷೇತ್ರದ ಆಸ್ತಿಯನ್ನು ನನಗೆ ನನ್ನ ತಂದೆ ಮಾರಾಟ ಮಾಡಿದ್ದಾನೆ. ನನ್ನ ಹೆಸರಿನಲ್ಲಿ ನಿಪಿಃ5ನ್ನು ಬರೆದುಕೊಟ್ಟಾಗ ಮಾರಾಟ ಮಾಡಿದ ಆಸ್ತಿಗೆ ನನ್ನ ತಂದೆ, ಸೈಯದ್ ಅಮಾನವುಲ್ಲಾ, ಸೈಯದ್ಸುಭಾನ್ ಹಾಗೂ ಸೈಯದ್ಸಾಬ್ಜಾನ್ ಇದ್ದರು ಅಂದರೆ ಸರಿಯಲ್ಲ. ಸಾಕ್ಷಿ ಮುಂದವರೆದು ಅವರೆಲ್ಲರೂ ಮುಖ್ತ್ಯಾರನಾಮೆ ಮೂಲಕ ಆಸ್ತಿಯನ್ನು ಹಂಚಿಕೊಂಡಾಗ ತನಗೆ ಮಾರಾಟ ಮಾಡಿದ ಆಸ್ತಿ ತನ್ನ ತಂದೆ ಹಿಸ್ಸೆಗೆ ಬಂದಿತ್ತು ಎಂದು ಹೇಳುತ್ತಾರೆ. ಇದನ್ನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ಮುಖ್ತ್ಯಾರನಾಮೆಯನ್ನು ಹಾಜರುಪಡಿಸಿಲ್ಲ. ಆ ಮುಖ್ತ್ಯಾರನಾಮೆ ನನ್ನ ಹತ್ತಿರ ಇದ್ದು ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ಮುಖ್ತ್ಯಾರನಾಮೆ ನನ್ನ ಹತ್ತಿರ ಇರದೇ ಇದ್ದಿದ್ದರಿಂದ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ನಿಪಿಃ1ರಡಿಯಲ್ಲಿ 1 ಎಕರೆ20 ಗುಂಟೆ ಜಮೀನನ್ನು ಸರ್ವೆ ನಂ.32ಃಪಿದಲ್ಲಿ ನನ್ನ ತಂದೆ, ಸೈಯದ್ ಅಮಾನವುಲ್ಲಾ, ಸೈಯದ್ಸುಭಾನ್ ಹಾಗೂ ಸೈಯದ್ಸಾಬ್ಜಾನ್ ಇವರು ಕೂಡಿ ಖರೀದಿಸಿದ್ದಾರೆ. ಖರೀದಿಯ ಹಣ ಎಷ್ಟು ಎಂಬುದು ನನಗೆ ಗೊತ್ತಿಲ್ಲ. ಅವರೆಲ್ಲರೂ ಬೀರಪ್ಪ ಇತನಿಂದ ಜಮೀನು ಖರೀದಿಸಿದ್ದಾರೆ. ಬೀರಪ್ಪ ಇತನಿಗೆ ಮಾರಾಟ ಮಾಡಿದಂತಹ ಆಸ್ತಿ ಯಾವ ಮೂಲದಿಂದ ಬಂದಿತ್ತು ಎಂಬುದು ನನಗೆ ಗೊತ್ತಿಲ್ಲ. ಅದರ ಉಲ್ಲೇಖ ನಿಪಿಃ1ರಲ್ಲಿ ಇದೆಯೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಬೀರಪ್ಪ ಇತನಿಗೆ ನಿಪಿಃ1ರಲ್ಲಿರುವ ಆಸ್ತಿ ನೊಂದಣಿ ವಿಭಾಗಪತ್ರದ ಸಂಖ್ಯೆ 1621ಃ1974-75ರ ಮೂಲಕ ಬಂದಿತ್ತು

ಅಂದರೆ ನನಗೆ ಗೊತ್ತಿಲ್ಲ. ವಿಭಾಗಪತ್ರದಲ್ಲಿ ಬೀರಪ್ಪ ಇತನಿಗೆ ಸರ್ವೆ ನಂ.32ರಲ್ಲಿ 5 ಎಕರೆ 3ವರೆ ಗುಂಟೆ ಜಮೀನು ಬಂದಿತ್ತು ಅಂದರೆ ನನಗೆ ಗೊತ್ತಿಲ್ಲ.

2) ಸರ್ವೆ ನಂ.32ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಅದನ್ನು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ. ಸರ್ವೆ ನಂ.32ರ ಒಟ್ಟು ಕ್ಷೇತ್ರ 10 ಎಕರೆ 7 ಗುಂಟೆ ಇದೆ ಅಂದರೆ ನನಗೆ ಗೊತ್ತಿಲ್ಲ. ಆ ಜಮೀನದಲ್ಲಿ ಬೀರಪ್ಪ ಮತ್ತು ಆತನ ತಮ್ಮ ನಾಗಪ್ಪ ಸಮನಾಗಿ ಹಿಸ್ಸೆಗಳನ್ನು ಪಡೆದುಕೊಂಡಿದ್ದಾರೆಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಖರೀದಿಸಿದ ಜಮೀನನ್ನು ಪರಿವರ್ತನೆ ಮಾಡಿಸಿದ ನಂತರ ಲೇಔಟ್ ಮಾಡಿದ ಕುರಿತು ದಾಖಲೆ ಹಾಜರುಪಡಿಸಿಲ್ಲ. ಸೈಟುಗಳ ವಿಂಗಡಣೆ ಆದದ್ದನ್ನು ನನ್ನ ತಂದೆ ತಿಳಿಸಿದ್ದಾರೆ. ನನ್ನ ತಂದೆ ಖರೀದಿಸಿದ ಜಮೀನದಲ್ಲಿ ಲೇಔಟ್ ಮತ್ತುಪ್ಲಾನ್ ಆಗಿದೆ ಆದರೆ ಕುರಿತು ದಾಖಲೆ ಇರುವುದಿಲ್ಲ. ಆ ಜಮೀನದಲ್ಲಿ ಮಾಡಿದಂತಹ ಸೈಟುಗಳು ಪಶ್ಚಿಮದಿಂದ ಪ್ರಾರಂಭವಾಗಿ ಪೂರ್ವಕ್ಕೆ ಮುಕ್ತಾಯಗೊಂಡಿವೆ. ನಿಪಿಃ1ರ ಜಮೀನದಲ್ಲಿ ಮಾಡಿದಂತಹ 33 ಸೈಟುಗಳು ಈಗ ಯಾರ ಹೆಸರಿನಲ್ಲಿ ಇವೆ ಎಂಬುದು ನನಗೆ ಗೊತ್ತಿರುವುದಿಲ್ಲ. ಈಗ ನನ್ನ ತಂದೆಯ ಹೆಸರಿನಲ್ಲಿ ಯಾವುದೇ ಸೈಟುಗಳು ಇರುವುದಿಲ್ಲ. ನಿಪಿಃ1ರಲ್ಲಿಕಾಣಿಸಿದಂತಹ ಉಳಿದಿ ಖರೀದಿದಾರರ ಹೆಸರಿನಲ್ಲಿ ಈಗ ಯಾವುದಾದರೂ ಸೈಟುಗಳು ಇವೆಯೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ನಿಪಿಃ1ರಲ್ಲಿ ಕಾಣಸಿಸಿದಂತಹ ಖರೀದಿದಾರರು ಪ್ರತ್ಯೇಕವಾಗಿ ತಮ್ಮ ಪಾಲಿಗೆ ಬಂದಂತಹ ಸೈಟುಗಳನ್ನು ಮಾರಾಟ ಮಾಡಿದ್ದು ನನ್ನ ತಂದೆ ಪ್ರತ್ಯೇಕವಾಗಿ ಎಂಟು ಸೈಟುಗಳನ್ನು ಮಾರಾಟ ಮಾಡಿದ್ದಾನೆ.

3) ನಿಪಿಃ5ರ ಮೂಲಕ ಸೈಟ್ ನಂ.17, 18, 21 ಹಾಗೂ 22ನ್ನು ಮಾರಾಟ ಮಾಡಿದ್ದಾರೆ. ಸೈಟ್ ನಂ.17ರ ಚೆಕ್ಕಬಂದಿಃ ಪೂರ್ವಕ್ಕೆ ಸೈಟ್ ನಂ.18, ಪಶ್ಚಿಮಕ್ಕೆ ಸೈಟ್ ನಂ.16, ಉತ್ತರಕ್ಕೆ ಬಾಬಾ ಸಾಬ್ ಇತನ ಸೈಟ್ ಹಾಗೂ ದಕ್ಷಿಣಕ್ಕೆ ರಸ್ತೆ. ಸೈಟ್ ನಂ.18ರ ಚೆಕ್ಕಬಂದಿಃ ಪೂರ್ವಕ್ಕೆ ಸೈಟ್ ನಂ.19, ಪಶ್ಚಿಮಕ್ಕೆ ಸೈಟ್ ನಂ.17, ಉತ್ತರಕ್ಕೆ ಬಾಬಾ ಸಾಬ್ ಇತನ ಸೈಟ್ ಹಾಗೂ ದಕ್ಷಿಣಕ್ಕೆ ರಸ್ತೆ, ಸೈಟ್ ನಂ.21ರ ಚೆಕ್ಕಬಂದಿಃ ಪೂರ್ವಕ್ಕೆ ಸೈಟ್ ನಂ.22, ಪಶ್ಚಿಮಕ್ಕೆ ಸೈಟ್ ನಂ.20, ಉತ್ತರಕ್ಕೆ ಬಾಬಾ ಸಾಬ್ ಇತನ ಸೈಟ್ ಹಾಗೂ ದಕ್ಷಿಣಕ್ಕೆ ರಸ್ತೆ, ಸೈಟ್ ನಂ.22ರ ಚೆಕ್ಕಬಂದಿಃ ಪೂರ್ವಕ್ಕೆ ಸೈಟ್

ನಂ.23, ಪಶ್ಚಿಮಕ್ಕೆ ಸೈಟ್ ನಂ.21, ಉತ್ತರಕ್ಕೆ ಬಾಬಾ ಸಾಬ್ ಇತನ ಸೈಟ್ ಹಾಗೂ ದಕ್ಷಿಣಕ್ಕೆ ರಸ್ತೆ ಇದೆ.

4) ಸೈಟ್ ನಂ.17ನ್ನು ಭೀಮಪ್ಪ ಇತನಿಗೆ ಮಾರಾಟ ಮಾಡಿದ್ದು, ಸೈಟ್ ನಂ.21 ಮತ್ತು 22ನ್ನು ಖರೀದಿ ಮಾಡಿದವರ ಹೆಸರು ನೆನಪಿಲ್ಲ. ಆ ಮೂರು ಸೈಟುಗಳ ಖರೀದಿಪತ್ರಗಳು ನೊಂದಣಿಯಾಗಿವೆ. ಆ ಪತ್ರಗಳ ನಕಲುಗಳನ್ನು ಹಾಜರುಪಡಿಸಿಲ್ಲ. ನಾನು ಸೈಟ್ ನಂ.17, 21 ಮತ್ತು 22ರ ಕುರಿತು ಖರೀದಿ ಪತ್ರಗಳನ್ನು ಮಾಡಿಕೊಡದೇ ಇದ್ದಿದ್ದರಿಂದ ಪತ್ರಗಳನ್ನು ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ನಾನು ನಿಪಿ:5ರಲ್ಲಿ ಖರೀದಿಸಿದಂತಹ ಆಸ್ತಿಗಳು ಸರ್ವೆ ನಂ.32:ಪಿ ಕ್ಷೇತ್ರ ಒಂದು ಎಕರೆ 5 ಗುಂಟೆ ಅನುಸೂಚಿ 2ರಲ್ಲಿ ಕಾಣಿಸಿದಂತಹ ಕ್ಷೇತ್ರದಲ್ಲಿ ಬರುವುದಿಲ್ಲ ಅಂದರೆ ಸರಿಯಲ್ಲ. ಬರುತ್ತವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಡಿಕ್ರಿದಾರಳು ಸರ್ವೆ ನಂ.32ರಲ್ಲಿ ಎಷ್ಟು ಕ್ಷೇತ್ರ ಕ್ಲೇಮ್ ಮಾಡಿದ್ದಾಳೆಂಬುದು ನನಗೆ ಗೊತ್ತಿಲ್ಲ. ಅವಳು ದಾವೆಯಲ್ಲಿ ಆ ಜಮೀನಿಗೆ ಸಂಬಂಧಿಸಿ ಹಾಜರುಪಡಿಸಿದ ದಾಖಲೆಗಳು ಯಾವುವು ಎಂಬುದನ್ನು ನಾನು ತಿಳಿದುಕೊಂಡಿಲ್ಲ. ಅವಳು ಸರ್ವೆ ನಂ.32:ಪಿದಲ್ಲಿ 4 ಎಕರೆ 5 ಗುಂಟೆಯಲ್ಲಿಯ ಹಿಸ್ಸೆಯನ್ನು ಕೇಳಿದ್ದಳು ಅಂದರೆ ನನಗೆ ಗೊತ್ತಿಲ್ಲ. ಆ ಜಮೀನಿನ ಪಹಣಿ 1980ರಿಂದ ಇಲ್ಲಿಯವರೆಗೆ ಅವಳ ಕುಟುಂಬದ ಸದಸ್ಯರ ಹೆಸರಿನಲ್ಲಿ ಇದೆ ಅಂದರೆ ನನಗೆ ಗೊತ್ತಿಲ್ಲ. ಆ ಪಹಣಿಗಳನ್ನು ತೋರಿಸಿದಾಗ ಸಾಕ್ಷಿ ಪಹಣಿಗಳಲ್ಲಿ 1980 ರಿಂದ 2013ರವರೆಗೆ ಡಿಕ್ರಿದಾರಳ ಮನೆಯ ಸದಸ್ಯರ ಹೆಸರುಗಳು ಕಂಡು ಬರುತ್ತವೆಂದು ಹೇಳುತ್ತಾರೆ. ಡಿಕ್ರಿದಾರಳಿಗೆ ಐಟಂ ನಂ.2ರಲ್ಲಿರುವ ಜಮೀನಿನ ಸ್ವಾಧೀನತೆ ನೀಡುವಾಗ ಸರ್ವೆಯರ್‌ರಿಂದ ಅಳತೆ ಮಾಡಿಸಲಾಗಿದೆಂದರೆ ಸರಿಯಲ್ಲ. ಆ ರೀತಿ ಸರ್ವೆಯರ್ ವರದಿ ತಯಾರಿಸಿದ್ದಾರೆಂದರೆ ಸಾಕ್ಷಿ ಸೃಷ್ಟಿ ಮಾಡಿದ್ದಾರೆಂದು ಹೇಳುತ್ತಾರೆ. ಡಿಕ್ರಿದಾರಳು ತನ್ನ ಸ್ವಾಧೀನಕ್ಕೆ ಪಡೆದ 1 ಎಕರೆ 5 ಗುಂಟೆ ಜಮೀನು ಈಗಲೂ ವ್ಯವಸಾಯದ ಜಮೀನು ಆಗಿ ಇದೆ ಅಂದರೆ ಸರಿಯಲ್ಲ. ಆದರೆ ಅಲ್ಲಿ ಸೈಟುಗಳು ಆಗಿವೆ. ನಾನು ಈ ಕೇಸಿನಲ್ಲಿಯ ಸರ್ವೆಯರ್ ಕೊಟ್ಟಂತಹ ನಕಾಶೆಯನ್ನು ಈ ಮೊದಲು ನೋಡಿಲ್ಲ. ಅದನ್ನು ಈಗ ತೋರಿಸಿದ್ದರಿಂದ ಸೃಷ್ಟಿಸಲಾಗಿದೆಂದು ಹೇಳಿದ್ದೆನೆ. 1 ಎಕರೆ 5 ಗುಂಟೆ ಕ್ಷೇತ್ರ ಪೂರ್ವದಿಂದ ಪಶ್ಚಿಮದ ಕಡೆಗೆ

ಉದ್ದಾಗಿದ್ದು ಪಶ್ಚಿಮಕ್ಕೆ ಕಿರ್ಲೋಸ್ಕರ ಕಂಪನಿ ಬಿಲ್ಡಿಂಗ್‌ವರೆಗೆ ಇದೆ ಅಂದರೆ ಸಾಕ್ಷಿ ಸೈಟುಗಳು ಇವೆ ಎಂದು ಹೇಳುತ್ತಾರೆ. ಆ ಜಮೀನಿನಲ್ಲಿ ಯಾವುದೇ ಫೌಂಡೇಶನ್‌ಗಳುಇರುವುದಿಲ್ಲ ಅಂದರೆ ಸಾಕ್ಷಿ ಈಗ ಹಾಕುತ್ತಿದ್ದಾರೆಂದು ಹೇಳುತ್ತಾರೆ.

(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ಜಡ್ಜ್ ಮತ್ತು ಹೆಚ್ಚುವರಿ
ಎಂಎಸಿಟಿ, ಹರಿಹರ.